

ಸಂಗಾತಿಯ ಯಾವುದೇ ಹಿತಸ್ಪರ್ಶವನ್ನೂ ಕಾಮದ ಕನ್ನಡಕದಿಂದ ನೋಡುವವರ ಕತೆಯೇನು?

ಡಾ.ವಿನೋದ ಛೆಬ್ಬಿ

# 285: ಹೊಸ ದಾರಿ- 25

ಜಗಳದ ಸಮಯದಲ್ಲೂ ಸಂಗಾತಿಯ ಸಾಮೀಪ್ಯದಿಂದ ನಮ್ಮ ಶರೀರವು ಅರಿವಿಲ್ಲದಂತೆ ಸ್ಫುರಿಸಬಲ್ಲದು ಎಂದು ಈ ಮುಂಚೆ ಮಾತಾಡಿಕೊಂಡೆವು (ಕಂತು 283). ದಾಂಪತ್ಯದಲ್ಲಿ ಶರೀರಗಳು ಹತ್ತಿರವಾದಾಗ ಕಾಮ, ಪ್ರಣಯಗಳು ಹುಟ್ಟುವುದೇನೋ ಸರಿ, ಮತ್ತಿನ್ನೇನು ಹುಟ್ಟಬಹುದು ಎಂಬುದನ್ನು ಈ ಸಲ ನೋಡೋಣ. ಸಂದರ್ಭ: ದೀಪಾವಳಿಯ ಮುಂಜಾವು. ಮಾಯಾ ಮಕ್ಕಳ ಮೈಗೆ ಎಣ್ಣೆಸವರಿ ತೀಡಿದವಳು ಮನೋಜನನ್ನೂ ಆಹ್ವಾನಿಸುತ್ತಾಳೆ.

ಮನೋಜ: ನನಗೆ ಮೈಯೆಲ್ಲ ಎಣ್ಣೆ ಹಚ್ಚಿಸಿಕೊಳ್ಳುವುದು ಇಷ್ಟವಿಲ್ಲ ಎಂದು ನಿನಗೆ ಗೊತ್ತಿದೆ. ಮತ್ತೇಕೆ ಕರೆದು ಇಲ್ಲವೆನ್ನಿಸಿಕೊಳ್ಳುತ್ತೀಯಾ?

ಮಾಯಾ: ಇದು ಆರೋಗ್ಯಕ್ಕೆ ಒಳ್ಳೆಯದು. ವರ್ಷಕ್ಕೆ ಒಂದು ಸಲವಾದರೂ ಬೇಡ ಎನ್ನಬೇಡಿ.

ಮನೋಜ: ಯಾವೊತ್ತೂ ನಮ್ಮಮ್ಮ ನನಗೆ ಹೀಗೆ ಮಾಡಿದ್ದಿಲ್ಲ. ಆದರೂ ಆರೋಗ್ಯವಾಗಿಲ್ಲವೆ?

ಎಣ್ಣೆಹಚ್ಚಿ ಎರೆಸಿಕೊಳ್ಳುವುದು ಮನೋಜನಿಗೆ ಯಾಕಿಷ್ಟವಿಲ್ಲ ಎಂದು ಯೋಚಿಸಿದರೆ ಮೈ ಜಿಗಿಯಾಗುವುದೋ, ಅಥವಾ ಮಾಯಾಳ ಪ್ರಭಾವಕ್ಕೆ ಒಳಗಾಗುವುದು ಬೇಡವೆಂದೋ ಇರಬಹುದು. ಅಥವಾ ಮಾಯಾಳ ಒತ್ತಾಯವನ್ನು ಪ್ರತಿಭಟಿಸುವ ಒಳದಂಗೆಯೂ ಇರಬಹುದು. ಆದರೆ ಶಾರೀರಿಕ ಸಂವೇದನೆಯ ಬೀಗದ ಕೈಯನ್ನು ಬಳಸಿ ಒಳಹೊಕ್ಕರೆ ಕಾಣುವ ಜಗತ್ತೇ ಬೇರೆ. ಇದನ್ನು ತಿಳಿದುಕೊಳ್ಳಲು ಬಾಲ್ಯಕ್ಕೆ ಹೋಗೋಣ.

ಅದೇ ಹುಟ್ಟಿದ ಶಿಶುವಿಗೆ ತಾನು ತಾಯಿಯಿಂದ ಬೇರ್ಪಟ್ಟು ಪ್ರತ್ಯೇಕ ಜೀವಿಯಾಗಿದ್ದೇನೆ ಎನ್ನುವ ಅರಿವು ಇರುವುದಿಲ್ಲ. ಬಾಯಿ ತೆರೆದಾಗಲೆಲ್ಲ ತುಟಿಗಳಿಗೆ ಸ್ತನದ ಸ್ಪರ್ಶವಾಗುವುದರಿಂದ 'ಅದೂ' ತಾನೂ ಒಂದೇ ಎಂದುಕೊಂಡಿರುತ್ತದೆ. ಸ್ತನವು ಸಿಗದಿರುವಾಗ 'ಅದು' ಇಲ್ಲವೆಂದು ಆತಂಕಿಸುತ್ತ, 'ಅದರಿಂದ ಹೊರತಾದ ತಾನು' ಎನ್ನುವ ಭಾವ ಮೂಡತೊಡಗುತ್ತದೆ. ಕ್ರಮೇಣ ಎರಡರ ನಡುವಿನ ವ್ಯತ್ಯಾಸವನ್ನು ಅರಿಯುತ್ತ 'ಇದು ನಾನು' ಹಾಗೂ 'ಇದು ಅದು' ಎಂದು ಪ್ರತ್ಯೇಕ ಭಾವ ಹುಟ್ಟುತ್ತದೆ. ವ್ಯಕ್ತಿ ಪ್ರತ್ಯೇಕತೆಯ (**differentiation, sense of self**) ಬೀಜ ಮೊಳೆಯುವುದು ಇಲ್ಲಿಯೇ. ಇಲ್ಲಿ ಹೊರವಸ್ತುವನ್ನು ಸಂಕೇತವಾಗಿ ಇಟ್ಟುಕೊಂಡಿದ್ದು (**object relationship**), ಸಂಕೇತವಿಲ್ಲದೆ ತನ್ನನ್ನು ಗುರುತಿಸಿಕೊಳ್ಳಲು ಆಗುವುದಿಲ್ಲ. ಸಂಕೇತವು ಕಾಣೆಯಾಗುವಾಗ ತನ್ನತನವೇ ಮಾಯವಾದಂತೆ ಅನಿಸುತ್ತದೆ – ಕನ್ನಡಿಯಲ್ಲಿ ಕಾಣುವ ಮುಖವನ್ನೇ ತನ್ನದು ಎಂದು ಅಂದುಕೊಂಡವರಿಗೆ ಕನ್ನಡಿ ಮಾಯವಾದಾಗ ತನಗೆ ಮುಖವೇ ಇಲ್ಲ ಎಂದುಕೊಂಡಂತೆ! ಹೀಗಾಗಿ ಇದು ಹುಸಿ ತನ್ನತನ (**false self**).

ಎರಡನೇ ವರ್ಷ ಮಗುವಿಗೆ ಮಹತ್ವದ ಘಟ್ಟ. ಅಷ್ಟೊತ್ತಿಗೆ ಅದು ತಾಯಿಯ ಕೆಲವು ವಿಶಿಷ್ಟ ಸ್ಪರ್ಶಗಳಿಗೆ (ಉದಾ. ನಿಂತುಕೊಂಡ ಕಾಲುಗಳನ್ನು ಅಪ್ಪುವುದು) ಅಲ್ಲದೆ ಹೊರಗಿನ ಸಂಕೇತಗಳಿಗೂ (ಉದಾ. ಬೊಂಬೆ, ತಲೆದಿಂಬು, ಹೊದಿಕೆ) ತಾತ್ಕಾಲಿಕವಾಗಿ ಅಂಟಿಕೊಳ್ಳುತ್ತದೆ. ತನ್ಮೂಲಕ ಸಿಗುವ ಹಿತವನ್ನು ಅನುಭವಿಸುತ್ತ ಹುಸಿ ತನ್ನತನವನ್ನು ಅಂತರ್ಗತ ಮಾಡಿಕೊಳ್ಳುತ್ತದೆ. ಒಂದುವೇಳೆ ಸಂಕೇತವು ಕಳೆದುಹೋದರೆ ತನ್ನನ್ನೇ ತಾನು ಗುರುತಿಸಲಾಗದೆ ರಂಪ ಮಾಡುತ್ತದೆ (ಒಗೆದ ಹೊದಿಕೆಯ ವಾಸನೆ ಬದಲಾದಾಗ ಬೇಡವೆನ್ನುವುದು ಇದೇ ಕಾರಣಕ್ಕೆ). ಆಗ ದೊಡ್ಡವರು ಏನು ಮಾಡುತ್ತಾರೆ? ಒಂದರ ಬದಲು ಇನ್ನೊಂದನ್ನು ಕೊಟ್ಟರಾಯಿತು ಎಂದುಕೊಳ್ಳುತ್ತಾರೆ. ಹೀಗೆ, ಸಂಕೇತಗಳಿಂದ ವಂಚಿತವಾಗುವ ಮಗುವಿಗೆ ಖಾಸಗಿತನ ಬೆಳೆಯಲು ಅವಕಾಶ ಸಿಗುವುದಿಲ್ಲ. ಪರಿಣಾಮವು ಎರಡು ರೀತಿಗಳಲ್ಲಿ ಕಾಣುತ್ತದೆ. ಒಂದು: 'ಇದು ನನ್ನ ಶರೀರ' ಎನಿಸಿಕೊಳ್ಳುವ ಶರೀರಭಾವವು (**physical sense**) ಹುಟ್ಟುವುದಿಲ್ಲ – ಕೆಲವರು ದೇಹಾರೋಗ್ಯವನ್ನು ಲೆಕ್ಕಿಸದೆ ಹಗಲಿರುಳೂ ದುಡಿಯುವುದು ಇದೇ ಕಾರಣದಿಂದ. ಎರಡು: ಸಂಗಾತಿಯು ಶರೀರವನ್ನು ಕೇವಲ ಆತ್ಮೀಯತೆಯಿಂದ ಸ್ಪರ್ಶಿಸಲು ಬಂದಾಗ ಅದನ್ನು ಹೇಗೆ ತೆಗೆದುಕೊಳ್ಳುವುದು ಎಂದು ಗೊತ್ತಾಗುವುದಿಲ್ಲ. ಆದುದರಿಂದ, ಯಾವುದೇ ಹಿತಸ್ಪರ್ಶಕ್ಕೂ ಕಾಮದ ಅರ್ಥಹಚ್ಚುತ್ತ (ನಮ್ಮಿಬ್ಬರ ಸ್ಪರ್ಶಕ್ರಿಯೆಯು ಕಾಮೋದ್ದೇಶಕ್ಕಾಗಿ ಮಾತ್ರ), ಅದಕ್ಕೆ ತಕ್ಕಂತೆ ತಮ್ಮ ಕಾಮಾಸಕ್ತಿಯನ್ನು ಪರಿಶೀಲಿಸುತ್ತಾರೆ. ಅದಿದ್ದರೆ ಸ್ಪರ್ಶವನ್ನು ಬರಮಾಡಿಕೊಳ್ಳುತ್ತಾರೆ; ಇಲ್ಲದಿದ್ದರೆ ನೆಪಹೇಳಿ, ಅಥವಾ ಆಕ್ಷೇಪಿಸಿ ದೂರ ಉಳಿಯುತ್ತಾರೆ. ಹಾಗೆಂದೇ ಎಣ್ಣೆನೀರಿಗೆ ಆಹ್ವಾನಿಸ್ಪಟ್ಟಾಗ ಅದರ ಪೂರ್ವಾನುಭವ ಮನೋಜನಲ್ಲಿ ಇಲ್ಲದಿದ್ದುದರಿಂದ (ನಮ್ಮಮ್ಮ ಯಾವೊತ್ತೂ ಹೀಗೆ ಮಾಡಿದ್ದಿಲ್ಲ) ಶರೀರಭಾವವು ಜಾಗೃತವಾಗಲಿಲ್ಲ; ಆಗಿದ್ದರೆ ಉತ್ಸಾಹದಿಂದ ಪಾಲುಗೊಳ್ಳುತ್ತ ಸಂಗಾತಿಯ ಸುಖಸ್ಪರ್ಶವನ್ನು ಅನುಭವಿಸಬಹುದಿತ್ತು.

ಶರೀರಭಾವದಿಂದ ವಂಚಿತವಾದ ಪ್ರಭಾವವು ಕಾಮಕೂಟದಲ್ಲೂ ಕಂಡುಬರುತ್ತದೆ. ಉದಾಹರಣೆಗೆ, ಸಂಭೋಗದ ಸಾಧ್ಯತೆ ಇಲ್ಲದಿರುವಾಗ (ಉದಾ. ಮುಟ್ಟಾದಾಗ) ಅಥವಾ ಸಂಭೋಗವಾದ ನಂತರ ಎಷ್ಟು ದಂಪತಿಗಳು ಸರಸವಾಡುತ್ತಾರೆ? ಸಂಗಾತಿಗಳನ್ನು ಜೋಡಿಸಲು ಕಾಮಾಸಕ್ತಿ ಹಾಗೂ ಪ್ರಣಯಭಾವದ ಹೊರತಾಗಿ ಮೂರನೆಯ ಭಾವ ಒಂದಿದೆ. ಅದೇ ನಿಷ್ಕಾಮ ವಾತ್ಸಲ್ಯ. ಇದು ಬಾಲ್ಯದಲ್ಲಿ ಸಾಕಷ್ಟು ಸಿಗದಿದ್ದರೆ ಅದರ ಬಗೆಗೆ ಅಪರಿಚಿತತೆ ಉಳಿಯುತ್ತದೆ. ಇಂಥವರಿಗೆ ಮುದ್ದು ಮಾಡಿಸಿಕೊಳ್ಳುವ ಪ್ರಸಂಗ ಬಂದಾಗ ನಾನೇನು ಮಗುವೆ ಎನ್ನುತ್ತ ದೂರ ಉಳಿಯುತ್ತಾರೆ; ಬೆಳೆದ ಮಕ್ಕಳ ಮೈ ಮುಟ್ಟುವುದನ್ನು ನಿಲ್ಲಿಸುತ್ತಾರೆ. ಕಾಮಭಾವ ಇಲ್ಲದಿದ್ದರೆ ಇವರು ಸಂಗಾತಿಯನ್ನು ಸಮೀಪಿಸಲಾರರು. ವಯಸ್ಸಾದ ಗಂಡಹೆಂಡಿತಿ ಒಟ್ಟಿಗೆ ಮಲಗದಿರುವುದಕ್ಕೆ ಇದೂ ಒಂದು ಕಾರಣ.

ಹಾಗಾದರೆ ದಂಪತಿ ನಡುವೆ ವಾತ್ಸಲ್ಯ ಭಾವವನ್ನು ತರುವುದು ಹೇಗೆ? ಇದಕ್ಕೆ ಹಲವು ರೀತಿಗಳಿವೆ (ಕೆಲವನ್ನು ನೀವೀಗಾಗಲೇ ಅನುಸರಿಸುತ್ತಿರಬಹುದು). ಟೀವಿ ವೀಕ್ಷಿಸುವಾಗ ಸಂಗಾತಿಯ ಹೆಗಲಮೇಲೆ ಅಥವಾ ತೊಡೆಯಮೇಲೆ ತಲೆಯಿಟ್ಟು ಒರಗಿಕೊಂಡು ತಲೆ–ಬೆನ್ನು ನೇವರಿಸಿಕೊಳ್ಳುವುದು; ಪರಸ್ಪರರ ಬೆರಳುಗಳನ್ನು ಹೊಸೆಯುತ್ತ ಆಟವಾಡುವುದು; ಮಾತಾಡದೆ ಸಂಗಾತಿಯ ಮುಖವನ್ನು ಹಿಡಿದುಕೊಂಡು ನೋಡುತ್ತ ಹಗುರವಾಗಿ ಮುದ್ದಿಸುವುದು ಇತ್ಯಾದಿ. ವೈಶಿಷ್ಟ್ಯವೆಂದರೆ ಇದರಲ್ಲಿ ಮಾತಿನ ಅಗತ್ಯವಿಲ್ಲ; ಸ್ಪರ್ಶ, ನೋಟ ಇದ್ದರಾಯಿತು. ಸಮಸ್ಯೆ ಏನೆಂದರೆ, ಹೆಚ್ಚಿನ ಸಂದರ್ಭಗಳಲ್ಲಿ ಇಬ್ಬರೂ ಸರಿಸಮನಾಗಿ ಸ್ಪಂದಿಸುವುದಿಲ್ಲ. ಒಬ್ಬರು ಮುಂದಾದಾಗ ಇನ್ನೊಬ್ಬರು ಹಿಂಜರಿಯಬಹುದು ಅಥವಾ ಅಷ್ಟಕ್ಕಷ್ಟೇ ಮಾಡಿ ಕೈಬಿಡಬಹುದು.

ಪ್ರಯೋಗ **20:** ಒಂದು ತಾಸಿನ ಏಕಾಂತದ ಸಮಯ ಆರಿಸಿಕೊಳ್ಳಿ. ಇಬ್ಬರೂ ನಗ್ನರಾಗಿ ಹತ್ತಿರವಾಗಿ. ಒಬ್ಬರು ನೇರವಾಗಿ ಕುಳಿತುಕೊಂಡು ತೊಡೆಗಳನ್ನು ಅಗಲವಾಗಿ ತೆರೆದುಕೊಳ್ಳಲಿ. ಇನ್ನೊಬ್ಬರು ತೆರೆದ ತೊಡೆಗಳ ನಡುವೆ ತಲೆಯಿಟ್ಟು ಒರಗಿ ಕಣ್ಣುಮುಚ್ಚಿ ಆಸ್ವಾದಿಸಲಿ. ಆಗ ಸಂಗಾತಿಯು ಮೈಕೈ ನೇವರಿಸುತ್ತ ಮುತ್ತಿಡಬಹುದು. ಇದರಲ್ಲಿ ಒಳಗೊಂಡಾಗ ಬಾಲ್ಯದಲ್ಲಿ ವಂಚಿತವಾದ ವಾತ್ಸಲ್ಯದ ಸ್ಪರ್ಶವನ್ನು ಅನುಭವಿಸಲು ಆಗಬಹುದೇ ಎಂದು ನೋಡಿ. ನಿಜರೂಪದಲ್ಲಿ ಸಂಗಾತಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತ ಬಾಲ್ಯದ ಸಂಕೇತಗಳು ಮರುಕಳಿಸುತ್ತವೆಯೋ ಎಂದು ನೋಡಿ. ಸಂಗಾತಿಯಿಂದ ಮಾಲೀಶು (**massage**) ಮಾಡಿಸಿಕೊಳ್ಳುವುದು ಇನ್ನೊಂದು ಪ್ರಯೋಗ. ಇಲ್ಲಿ ನಗ್ನತೆಗೆ ವಿಶೇಷ ಕಾರಣವಿದೆ: ಅದೇನೆಂಬುದನ್ನು ನೀವೇ ಊಹಿಸಿ!

ವಾರದ ಪ್ರಶ್ನೆಗಳು: ಏನೂ ಮಾಡದೆ ಸುಮ್ಮನೆ ಮಲಗಿರುವಾಗ ಮನಸ್ಸು ಎಲ್ಲೆಲ್ಲೋ ಹೋಗುತ್ತ ಇರುತ್ತದಲ್ಲವೆ? ಆಗ ಹೀಗೆ ಯೋಚಿಸಿ: ನಾನು ಶಿಶುವಾಗಿರುವಾಗ ತಾಯಿಯೊಡನೆಯ ಸಂಪರ್ಕ ಹೇಗಿದ್ದಿರಬಹುದು? ನನಗೆ ಯಾವ ಭಾವವನ್ನು ಕೊಟ್ಟಿದ್ದಿರಬಹುದು? ಆದಷ್ಟು ಹಿಂದಕ್ಕೆ ಹೋಗುತ್ತ ಹೊಳೆದ ಭಾವಗಳನ್ನೂ ಕಲ್ಪನೆಗಳನ್ನೂ ಹಿಂಜರಿಯದೆ ಸಹಜವಾಗಿ ಒಪ್ಪಿಕೊಳ್ಳಿ. ಇಷ್ಟವಾದರೆ ನನ್ನೊಡನೆ ಹಂಚಿಕೊಳ್ಳಿ.

ಸಂಪರ್ಕಕ್ಕೆ: **8494933888; Email: vinod.chebbi@gmail.com**